ಫ್ಯಾಕ್ಸ್: 080-23332521 ದೂರವಾಣಿ: 080 – 23332521 / 23330153 ವಿಸ್ತರಣೆ : (259)

# ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು

ಸ್ವಾತಂತ್ರ್ಯದ ಅಮೃತಮಹೋತ್ಸವ

ಆಡಳಿತಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560065

ಸಂಖ್ಯೆ: ಆಕ/ಸಾ.ವಿ /ಕೋವಿಡ್–19/ 2022–23 ದಿನಾಂಕ: 27/04/2022

## ಸು ತ್ತೋ ಲೆ

ವಿಷಯ: ಕೋವಿಡ್–19 ಕೊರೊನಾ ವೈರಾಣು ಸೋಂಕಿನ ಪ್ರಸರಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವ ಕುರಿತು.

ಉಲ್ಲೇಖ: 1 ಮುಖ್ಯ ಕಾರ್ಯದರ್ಶಿಗಳು,ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು– ರವರ ದಿನಾಂಕ: 25/04/2022ರ ಆದೇಶದ ಸಂಖ್ಯೆ: CHS 258/2022

2 ಕುಲಪತಿಗಳು, ಕೃವಿವಿ, ಗಾ.ಕೃ.ವಿ.ಕೇಂ., ಬೆಂಗಳೂರುರವರ ಅನುಮೋದನೆ ದಿನಾಂಕ: 26/04/2022

><><><><><

ದೆಹಲಿ, ಹರ್‍ಯಾಣ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಕೋವಿಡ್–19 ಕೋರೊನಾ ವೈರಾಣು ಸೋಂಕಿನ ಹೊಸ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದ್ದು, ಕರ್ನಾಟಕದಲ್ಲೂ ಸಹ ಪ್ರಕರಣಗಳು ತುಸು ಏರಿಕೆ ಕಾಣುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸರ್ಕಾರವು ಉಲ್ಲೇಖದ ದಿನಾಂಕ: 25/04/2022ರ ಆದೇಶದ ಮೂಲಕ ಕೆಲವು ನಿರ್ಬಂಧಗಳನ್ನು ಪಾಲಿಸಲು ಸೂಚಿಸಿ ಆದೇಶಿಸಿರುತ್ತದೆ. ಅದರಂತೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳು (ಬೋಧಕ/ಬೋಧಕೇತರ) ಹಾಗೂ ಅಧ್ಯಯನ ನಡೆಸುತ್ತಿರುವ ಎಲ್ಲಾ ವಿದ್ಯಾರ್ಥಿಗಳು (ಡಿಪ್ಲೋಮಾ / ಸ್ನಾತಕ / ಸ್ನಾತಕೋತ್ತರ) ಕಛೇರಿ / ತರಗತಿಗಳಲ್ಲಿ ಮಾಸ್ಕ್ ಧರಿಸುವುದು, ಕನಿಷ್ಟ 2 ಅಡಿ ಸಾಮಾಜಿಕ ಅಂತರ ಕಾಪಾಡುವುದು ಮತ್ತು ಸ್ಯಾನಿಟೈಸರನ್ನು ಬಳಸುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಆವರಣದಲ್ಲಿರುವ ಕಛೇರಿ / ವಿಭಾಗಗಳ ಮುಖ್ಯಸ್ಥರು ತಮ್ಮ ಅಧೀನದಲ್ಲಿರುವ ಸಿಬ್ಬಂದಿಗಳು (ಬೋಧಕ / ಬೋಧಕೇತರ) ಹಾಗೂ ವಿದ್ಯಾರ್ಥಿಗಳು (ಡಿಪ್ಲೋಮಾ / ಸ್ನಾತಕ / ಸ್ನಾತಕೋತ್ತರ) ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕ್ರಮ ತೆಗೆದು ಕೊಳ್ಳುವುದು.

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

ಪ್ರತಿಗಳು:

1. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಆವರಣಗಳ ವಿಭಾಗಗಳ / ಯೋಜನೆಗಳ ಮುಖ್ಯಸ್ಥರು ವಲಯ ಕೃಷಿ ಸಂಶೋಧನಾ ಕೇಂದ್ರಗಳು/ ಕೃಷಿ ಸಂಶೋಧನಾ ಕೇಂದ್ರಗಳು/ಕೃಷಿ ವಿಜ್ಞಾನ ಕೇಂದ್ರಗಳು. } ಎಲ್ಲಾ ನೌಕರರ /ವಿದ್ಯಾರ್ಥಿಗಳ ಗಮನಕ್ಕೆ ತರುವುದು
3. ಮುಖ್ಯಸ್ಥರು, ಎ.ಕೆ.ಎಂ.ಯು, ಕೃ.ವಿ.ವಿ., ಗಾ.ಕೃ.ವಿ.ಕೇ, ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯದ
4. ವಿಶೇಷಾಧಿಕಾರಿಗಳು ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ ಗಾಕೃವಿಕೇ, ಬೆಂಗಳೂರು
5. ವಿಶೇಷಾಧಿಕಾರಿಗಳು ಕೃಷಿ ಮಹಾವಿದ್ಯಾಲಯ ಚಾಮರಾಜನಗರ
6. ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ. (AKMU@UAS.Bangalore.edu.in)
7. ಕುಲಪತಿಗಳ ಕಾರ್ಯದಶಿಗಳು, ಕುಲಪತಿಗಳ ಕಛೇರಿ, ಗಾಕೃವಿಕೇ,.ಬೆಂಗಳೂರು.
8. ಕಛೇರಿ ಕಡತಕ್ಕೆ